ಓ ಎಸ್ ನಂ. 24/2015
ಡಿ ಡಬ್ಲ್ಯು 2
ದಿನಾಂಕ 04/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ಮತ್ತು 3 ನೇ ವಾದಿಗಳ ಪರಃ ಶ್ರೀ ಪಿ ಆರ್ ಸಿ ವಕೀಲರಿಂದಃ

ಕ್ರಯಪತ್ರ ಮಾಡಿಕೊಂಡ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ಕನ್ನಡದಲ್ಲೇ ಟೈಪ್ ಮಾಡಿಸಲಾಗಿತ್ತು ಎಂದರೆ ಸರಿ. ನನಗೆ ಕನ್ನಡ ಓದಲು ಬರುವುದಿಲ್ಲ. ಕ್ರಯಪತ್ರದಲ್ಲಿ ಬರೆದಿರುವ ಒಕ್ಕಣಿಕೆಗಳನ್ನು ನಾನು ತಿಳಿದುಕೊಳ್ಳದೆ ನಂಬಿಕೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ ಸಮಯದಲ್ಲಿ ಹನುಮಕ್ಕ ಮತ್ತು ಅಕ್ಕಮ್ಮರವರು ಬಂದಿರುತ್ತಾರೆ ಎಂದು ತಿಳಿಸಿದ್ದು ಅವರ ಜತೆ ಅವರ ಹೆಣ್ಣು ಮಕ್ಕಳು ಬಂದಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಾನು ಖರೀದಿಸಿರುವ ಸ್ವತ್ತು ಮೂಲತಃ ದಾಸಪ್ಪರವರಿಂದ ಕೃಷ್ಣಪ್ಪರವರಿಗೆ ಕೃಷ್ಣಪ್ಪರವರಿಂದ ನಾಗರಾಜು ಮತ್ತು ತಿಮ್ಮರಾಯರವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ನಾನು ಖರೀದಿಸಿರುವ ಸ್ವತ್ತು ವಿಭಾಗದಲ್ಲಿ ಬಂದಿದ್ದು ಅದನ್ನು ನಾನು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಕೃಷ್ಣಪ್ಪರವರ ಎರಡನೇ ಹೆಂಡತಿಯ ಹೆಣ್ಣು ಮಕ್ಕಳಾದ ವಾದಿ

ಲಲಿತಮ್ಮ ಗೌರಮ್ಮ ಮತ್ತು ಲಕ್ಷ್ಮೀದೇವಮ್ಮರವರು ಪಕ್ಷಗಾರರಾಗಿಲ್ಲದೆ ಇರುವುದರಿಂದ ಸದರಿ ವಿಭಾಗ ಪತ್ರ ಅಸಿಂಧುವಾಗಿರುತ್ತದೆ ಎಂದರೆ ಸಾಕ್ಷಿ ಹೆಣ್ಣು ಮಕ್ಕಳು ಇದ್ದ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ವಿಭಾಗ ಪತ್ರದ ಆಧಾರದಲ್ಲಿ ನಾನು ಕ್ರಯಪತ್ರ ಮಾಡಿಕೊಂಡಿರುವುದನ್ನು ಸದರಿ ಕ್ರಯಪತ್ರಕ್ಕೆ ಯಾವುದೇ ಬೆಲೆ ಇರುವುದಿಲ್ಲ ಎಂದರೆ ಸಾಕ್ಷಿ ವಾದಿಗಳ ತಾಯಂದಿರು ಸಹಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.